


# ಕವಿತೆ

ಸುಳ್ಳು ಹೇಳುವ ನಾಲಗೆ ಬೇಡ
ನಿಜವು ಹೇಳುವ ಕಂಗಳು ಸಾಕು

ಕಂಗಳೆಂದೂ ಸುಳ್ಳು ಹೇಳುವುದಿಲ್ಲ
ಸುಳ್ಳು ಹೇಳಲು ಕಣ್ಣೀರು ಬಿಡುವುದಿಲ್ಲ

ಏನಿಲ್ಲ, ಏನುಂಟು ನಿನ್ನ ಈ ಕಣ್ಣೀರಲಿ
ನೋವು, ನಲಿವು ಎರಡೂ ಹನಿ ಉರುಳಲಿ

ಗೆಳತಿ ಕಣ್ಣ ರೆಪ್ಪೆಯ ನೀ ಕ್ಷಣಕೊಮ್ಮೆ ಮುಚ್ಚಿ
ನನ್ನ ಹೃದಯವು ಅದರೊಳಗೆ ಸಿಲುಕಿ ಅಪ್ಪಚ್ಚಿ

ಕಣ್ಣಬೊಂಬೆಯ ಒಳಗೆ ನನ್ನದೇ ಪ್ರತಿಬಿಂಬ
ನಾಲಗೆಯಲೇಕೆ ಈ ಹುಸಿಕೋಪ ಜಂಭ

ಕಂಗಳೆಂದೂ ಸುಳ್ಳು ಹೇಳುವುದಿಲ್ಲ
ಸುಳ್ಳು ಹೇಳಲು ಕಣ್ಣೀರು ಬಿಡುವುದಿಲ್ಲ.

● ಬಿ.ಎಂ. ಹನೀಫ್



